ಫ್ರೆಂಚ್‌ರಾಕ್ಸ್ ಸಬ್ ಡಿವೀಜ್ಞ.

ತಾರೀಖು 19ನೇ ಫಿಬ್ರವರೀ 1887.

ಫ್ರೆಂಚರಾಕ್ಸ್ ಸಬ್ ಡಿವೀಜ್ಞ ಮಳವಳ್ಳಿ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಜೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸಿ ಇರುವ ದಸ್ತ್ಯೆವಜನ್ನು ಹಾಜರ್ಮಾಡಿದವರೇ ಅಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷ್ಣ ಆಕ್ಟ್ 85ನೇ ಸೆಕ್ಷ್ಯನ್ ಮೇರೆ ನಾಶಪಡಿಸಲ್ಪಡುತ್ತೆ.

ರಿಜಿಸ್ಟ್ರೇಷ್ಣ ನಂಬರ್.	ಬರದುಕೊಟ್ಟವರ ಹೆಸರು ನಮತು ನಾಸಸ್ಥಳ.	ಬರಿಸಿಕೊಂಡವರ ಹೆಸರು ನಮತು ನಾಸಸ್ಥಳ.	ದಸ್ತ್ಯೆವಜು ಹುಟ್ಟಿದ ಸಾಲ್ಯಾಕ್ಷಿ ತಾರೀಖು.	ರಿಜಿಸ್ಟ್ರಾಗೆ ಹಾಜರಾದ ಸಾಲ್ಯಾಕ್ಷಿ ತಾರೀಖು.	ರಿಜಿಸ್ಟ್ರಾದ ಸಾಲ್ಯಾಕ್ಷಿ ತಾರೀಖು.	ದಸ್ತ್ಯೆವಜಿನ ಸ್ವಭಾವ ಮತ್ತು ಕಿಮ್ಮತ್ತು.
1884—85ನೇ ಇಸವಿ 2ನೇ ನಂಬರ್ ಬಿಕ್ಕಿನ 4ನೇ ನಂಬರು.	ಯಳಂದೂರು ತಾಲ್ಲೂಕು ಯರಗಂಬಳ್ಳಿ ನಾಸಸ್ಥರಾದ ವೀರಬದುಕೊಪ್ಪುವರ ಹೆಸರು ರಜ ಯ್ಯನ ಮಾದಯ್ಯನ ಮಕ್ಕಳು ಜೀವನದ 1ನೇ ಕುರಗ ನಾಮದಯ್ಯ 2ನೇ ಬಸವಯ್ಯ 3ನೇ ಹುಟ್ಟು ನಾಮಯ್ಯ.	ನಜಳಗಲ್ಲಿ ತಾಲ್ಲೂಕು ನಜಳಾಪುರದ ದಾಖಲೆ ನಂಜೇಗವ್ಯಡನ ಹೊಡಿಯಲ್ಲಿ ಯಿರುವ ಜೀರಾಯಿತು ಜೀವನದ ಚಿಕ್ಕ ಬಸವಯ್ಯನ ಮಗ ನಾಮಯ್ಯ.	1884ನೇ ಇಸವಿ ಏಪ್ರಲ್ ತಾರೀಖು 21.	1884ನೇ ಯಿಸವಿ ಜುಲೈ ತಾರೀಖು 23.	ದಸ್ತ್ಯೆವಜು ತಿರಸ್ಕರಿಸಿದ ತಾರೀಖು 22—12—84.	ನಂಬರ್ 24ನೇ ಮೂರೀಗುಡಿ ಹೊಲ 1ಕ್ಕೆ ಬೀಜವರಿ 0-3-5 ಕಂದಾಯ 1-6-0 ನಂಬರ್ 61ನೇ ಹೊಲ ಬೀಜವರಿ 0-1-0 ಕಂದಾಯ 0-4-8 ನಂಬರು 62ನೇ ಹೊಲ ಬೀಜವರಿ 0-7-2½ ಕಂದಾಯ 2-7-5 ಮತ್ತು ಅಕ್ಕಸಾಲೆ ಬಸವಯ್ಯನ ಹೊಲಕ್ಕೆ ಪಶ್ಚಿಮ ಬಸವಯ್ಯನ ಪಾಳು ನಿವೇಶನಕ್ಕೆ ಪೂರ್ವ ಬಸವಯ್ಯನ ಹೊಲಕ್ಕೆ ದಕ್ಷಿಣ ರಾಜಬೀದಿಗೆ ಪುತ್ತರ ಈ ಮಧ್ಯೆ ಪಾಳು ನಿವೇಶನದ ಪೈಕಿ ಪೂರ್ವ ಪಶ್ಚಿಮ ಗಜ 15 ದಕ್ಷಿಣೋತ್ತರ ಗಜ 18 ಪೈಕಿ ನಿವೇಶನ ಸಹ 34 ರೂ ಪಾಯಿಗಳಿಗೆ ತೆಗದುಕೊಂಡು ಕ್ರಯಕ್ಕೆ ಕೊಟ್ಟುರುವದಾಗಿ ಕ್ರಯಪತ್ರದಲ್ಲಿ ನಮೂದು ಯಿರುತ್ತೆ.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 18ನೇ ಫಿಬ್ರವರೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸೋಣಾದ 5 ರಿಜಸ್ಟ್ರಾದ ತಮಸೂಕುಗಳು ಮಂಜಿರಾಬಾದ್ ಸಬ್ ರಿಜಿಸ್ಟ್ರಾರ್ರ ಆಫೀಸಿನಲ್ಲಿ ಜೇವಾರಸಾಗಿ ನಿಂತು ಯಿರುತ್ತವೆ. ಸದರೀ ತಮಸೂಕುಗಳನ್ನು ರಿಜಿಸ್ಟರಿಗೆ ಹಾಜರ್ ಮಾಡಿದವರಾಗಲೀ ಅದರಲ್ಲಿ ಬಾಧ್ಯತೆವುಳ್ಳವರಾಗಲೀ ಈ ಲಾಗಾಯತು 1 ತಿಂಗಳೊಳಗಲ್ಲಿ ಸದರೀ ಸಬ್ ರಿಜಿಸ್ಟ್ರಾರ್ರಲ್ಲಿ ಹಾಜರಾಗಿ ವಾಪಸ್ ಪಡಿಯಬಹುದು ಯಿಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷ್ಣ ಆಕ್ಟ್ 85ನೇ ಸೆಕ್ಷ್ಯನ್‌ಪ್ರಕಾರ ಅವುಗಳು ನಾಶಪಡಿಸಲ್ಪಡುವವು.